Presented on : 21-08-2025
Registered on : 21-08-2025
Decided on : 07-03-2026
Duration : 6 months, 16 days.

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ , ಜೇವರಗಿ.**

**ದಿನಾಂಕ : 7 ನೇ ಮಾರ್ಚ್ ಮಾಹೆಯ 2026**

ಉಪಸ್ಥಿತರು: ಶ್ರೀಮತಿ ತಯ್ಯಬಾ ಸುಲ್ತಾನಾ. ಬಿ.ಎ.ಎಲ್.ಎಲ್.ಬಿ,
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ಜೇವರ್ಗಿ.

**ಅಪರಾಧಿಕ ಪ್ರಕರಣ ಸಂಖ್ಯೆ: 366/2025**

ಫಿರ್ಯಾಧಿದಾರರು:

ರಾಜ್ಯ ಸರ್ಕಾರದ ಪರ ಜೇವರ್ಗಿ ಪೊಲೀಸರು
ಜೇವರಗಿ ಪೊಲೀಸ ಠಾಣೆ,

(ಪರ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿಯ ಹೆಸರು:

ರೇಣುಕಾ ಗಂಡ ಶರಣಬಸಪ್ಪ ಗೋಳೇದ,
ವಯಸ್ಸು: 39 ವರ್ಷ,
ಉದ್ಯೋಗ: ಮನೆ ಕೆಲಸ,
ವಾಸಾ: ಕಟ್ಟಿ ಸಂಗಾವಿ,
ತಾ: ಜೇವರ್ಗಿ,
ಹಾಲಿ ವಸತಿ: ಬಸವೇಶ್ವರ ನಗರ, ಜೇವರ್ಗಿ,
ತಾ: ಜೇವರ್ಗಿ.

(ಆರೋಪಿ ಪರ ಶ್ರೀ ಸಿ. ಆರ್. ಪಿ., ವಕೀಲರು)

**ತೀರ್ಪು**

1. ಜೇವರ್ಗಿ ಪೊಲೀಸ್ ಠಾಣೆಯ ವೃತ ನಿರೀಕ್ಷಕರವರು ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಕಲಂ.305 ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇದೆಃ**

ಜೇವರಗಿ ಪೊಲೀಸ ಠಾಣೆ ಸರಹದ್ದಿಯ ಪೈಕಿ ಬಣಮಗಿ ಗ್ರಾಮದ ಪಿರ್ಯಾದಿಯ ಸಂಬಂಧಿಕರಾದ ಮಹೇಶ ತಂದೆ ಈರಣ್ಣಗೌಡ ಪಾಟೀಲ ಇವರ ಮನೆಯಲ್ಲಿ ಘಟನೆ ಜರುಗಿರುತ್ತದೆ, ಚಾಸಾ.1 ನೇದ್ದವರ ಸಂಬಂಧಿ ಮಹೇಶ ಈತನ ಮದುವೆ ದಿನಾಂಕ 18-05-2025 ರಂದು ಇರುವುದರಿಂದ ಮದುವೆ ಕಾರ್ಯಾಕ್ರಮಕ್ಕೆ ಆರೋಪಿತಳು ಮದುವೆಗೆ ಹೋಗಿದ್ದಳು. ದಿನಾಂಕ 17-05-2025 ರಂದು ರಾತ್ರಿ ಹಳದಿ ಕಾರ್ಯಾಕ್ರಮ ಇದ್ದಿದ್ದರಿಂದ ಮನೆಯವರೆಲ್ಲರೂ ಬೆಳಿಗ್ಗೆ 5.00 ಗಂಟೆಯವರೆಗೆ ಕಾರ್ಯಾಕ್ರಮ ಮಾಡಿ ಮಲಗಿಕೊಂಡಿರುತ್ತಾರೆ. ಆರೋಪಿತಳಾದ ರೇಣುಕಾ ಇವಳು ಕಳ್ಳತನ ಮಾಡುವ ಉದ್ದೇಶದಿಂದ ಬೇಡ್ ರೂಮಿನಲ್ಲಿ ಹೋಗಿ ಒಟ್ಟು 17 ತೋಲೆ ಬಂಗಾರದ ಆಭರಣಗಳು ಒಟ್ಟು 8,50,000=00 ಮತ್ತು ಕಿಮ್ಮತ್ತಿನ ಆಭರಣಗಳು ಕಳ್ಳತನ ಮಾಡಿರುತ್ತಾಳೆ. ಪ್ರಕರಣದ ತನಿಖೆ ಕಾಲಕ್ಕೆ ಚಾಸಾ.8 ರಿಂದ 13 ರವರು ಸಂಶಯ ವ್ಯಕ್ತಪಡಿಸಿದ ಮೇರೆಗೆ ಆರೋಪಿ ರೇಣುಕಾ ಇವಳಿಗೆ ವಿಚಾರಣೆ ಮಾಡಲಾಗಿ ಆರೋಪಿತಳು ಕಳ್ಳತನ ಮಾಡಿದ್ದ ಬಗ್ಗೆ ಒಪ್ಪಿಕೊಂಡಿರುತ್ತಾಳೆ. ನಂತರ ಆರೋಪಿಳು ಒಪ್ಪಿಕೊಂಡು ಪ್ರಕರಣಕ್ಕೆ ಸಂಬಂಧಿಸಿದ ಒಟ್ಟು ಮುದ್ದೆಮಾಲು ಹಾಜರುಪಡಿಸಿದ್ದು ಇರುತ್ತದೆ. ಕಾರಣ ಭಾರತೀಯ ನ್ಯಾಯ ಸಂಹಿತಾ ಕಲಂ.305 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಚಾಸಾ-1 ರವರು ಆರೋಪಿತಳ ವಿರುದ್ದ ನೀಡಿದ ಪೀರ್ಯಾದಿ ಅರ್ಜಿಯ ಅನ್ವಯ ಜೇವರ್ಗಿ ಪೊಲೀಸರು ತನಿಖೆಯನ್ನು ಕೈಗೊಂಡು ಆರೋಪಿತಳ ವಿರುದ್ದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣಾ ಪತ್ರವನ್ನು ಪರಿಶೀಲಿಸಿ ನ್ಯಾಯಾಲಯವು ಆರೋಪಿತಳ ವಿರುದ್ಧ

ಮೇಲ್ಕಂಡ ಅಪರಾಧಗಳಿಗೆ ಸಂಜ್ಞಿತೆಯನ್ನು ತೆಗೆದುಕೊಂಡು ಆರೋಪಿತಳ ಹಾಜರಾತಿ ಪಡೆದು, ದೋಷಾರೋಪಣ ಪತ್ರದ ನಕಲನ್ನು ಆರೋಪಿತಳಿಗೆ ಒದಗಿಸಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 230 ರ ಷರತ್ತನ್ನು ಪಾಲನೆ ಮಾಡಿ, ಆಪಾದನೆಗಳನ್ನು ರಚಿಸಿ ಓದಿ ಹೇಳಿದಾಗ, ಆರೋಪಿತಳು ತಾನು ತಪ್ಪು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾಳೆ.

4. ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವ ಅಪರಾಧವನ್ನು ಆರೋಪಿತಳು ಮಾಡಿರುತ್ತಾಳೆಂದು ಸಾಬೀತುಪಡಿಸಲು ಅಭಿಯೋಜನೆಯು ಒಟ್ಟು 17 ಜನ ಸಾಕ್ಷಿದಾರರಲ್ಲಿ 12 ಸಾಕ್ಷಿದಾರನನ್ನು ಪ್ರಾಸಾ-1 ರಿಂದ ಪ್ರಾಸಾ-12 ಎಂದು ವಿಚಾರಣೆಗೆ ಒಳಪಡಿಸಿ 18 ದಾಖಲೆಗಳನ್ನು ನಿಪಿ-1 ರಿಂದ ನಿಪಿ-18 ಎಂದು ನಿಶಾನೆಕರಿಸಿಕೊಂಡಿದೆ.

5. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ.351 ರನ್ವಯ ಆರೋಪಿತಳನ್ನು ವಿಚಾರಣೆಗೆ ಒಳಪಡಿಸಿದ್ದು, ಆರೋಪಿತಳು ತನ್ನ ಹೇಳಿಕೆಯಲ್ಲಿ ಅಭಿಯೋಜನೆಯ ಸಾಕ್ಷಿಗಳು ಹೇಳಿರುವ ಸಾಕ್ಷ್ಯವು ಸುಳ್ಳು ಎಂದು ಹೇಳಿರುತ್ತಾಳೆ. ಆದರೆ ತನ್ನ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಲಿಖಿತ ಸಾಕ್ಷ್ಯವನ್ನಾಗಲಿ ಹಾಜರುಪಡಿಸಿರುವುದಿಲ್ಲ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು ಮತ್ತು ಕಡತಗಳನ್ನು ಪರಿಶಿಲಿಸಲಾಯಿತು.

7. ಈ ಮೇಲಿನ ಮೊಕದ್ದಮೆಯಲ್ಲಿ ನ್ಯಾಯಾಲಯವು ತೀರ್ಮಾನಿಸಬೇಕಾದ ಅಂಶಗಳು ಈ ಕೆಳಕಂಡಂತಿದೆ.

**ಅಂಶಗಳು**

1. ಆರೋಪಿ ದಿನಾಂಕ 17-05-2025 ರಂದು ಜೇವರ್ಗಿ ಪೊಲೀಸ ಠಾಣಾ ವ್ಯಾಪ್ತಿಯ ಬಣಮಿ ಗ್ರಾಮದಲ್ಲಿ ಚಾಸಾ-1 ಕರುಣಾಸಾಗರ ರವರ ಸಂಬಂಧಿಕರಾದ ಮಹೇಶ ತಂದೆ ಈರಣ್ಣಗೌಡ ಪಾಟೀಲ ಇವರ ಮನೆಯಲ್ಲಿ ಮದುವೆ ಕಾರ್ಯಾಕ್ರಮ ಇದ್ದು ಸದರಿ ಮದುವೆ ಕಾರ್ಯಕ್ರಮದ ಅಂಗವಾಗಿ ಸದರಿ ದಿನಾಂಕದಂದು ರಾತ್ರಿ ಹಳದಿ ಕಾರ್ಯಾಕ್ರಮ ಇದ್ದು ಸದರಿ ಹಳದಿ ಕಾರ್ಯಾಕ್ರಮ ಸದರಿ ದಿನಾಂಕದಂದು ಬೆಳಿಗ್ಗೆ 05.00 ಗಂಟೆವರೆಗೆ ಮಾಡಿ ಎಲ್ಲರೂ ಮಲಗಿಕೊಂಡಿದ್ದಾಗ ಆರೋಪಿತಳು ಬೆಡ್ ರೂಮಿಗೆ ಹೋಗಿ ಚಾಸಾ-9 ಮತ್ತು 10 ರವರು ತಮಗೆ ಸಂಬಂಧಪಟ್ಟ ಬ್ಯಾಗಿನಲ್ಲಿ ಇಟ್ಟಿದ ಒಟ್ಟು ರೂ.8,50,000/- ಕಿಮ್ಮತ್ತಿನ 17 ತೊಲೆ ಬಂಗಾರದ ಆಭರಣಗಳನ್ನು ತಮ್ಮ ಸ್ವಂತ ಲಾಭಕ್ಕೋಸ್ಕರ ಅಪ್ರಮಾಣಿಕತೆಯಿಂದ ಕಳ್ಳತನ ಮಾಡಿಕೊಂಡು ಹೋದ ಕಾರಣ ಭಾರತೀಯ ನ್ಯಾಯ ಸಂಹಿತಾ ಕಲಂ 305 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಾಯಾತೀತವಾಗಿ ರುಜುವಾತು ಪಡಿಸಿರುವುದೇ?

2. ಯಾವ ಆದೇಶ?

8. ಮೇಲೆ ಹೇಳಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

| | | |
|---|---|---|
| ಅಂಶ 1 | : | ನಕಾರಾತ್ಮಕ |
| ಅಂಶ 2 | : | ಅಂತಿಮ ಆದೇಶ |

ಈ ಕೆಳಕಂಡಂತೆ ಕಾರಣಗಳು.

**:ಕಾರಣಗಳು:**

9. **ಅಂಶ-1 :** ಅಭಿಯೋಜನೆಯ ಪ್ರಕಾರ ಜೇವರಗಿ ಪೊಲೀಸ ಠಾಣೆ ಸರಹದ್ದಿಯ ಪೈಕಿ ಬಣಮಗಿ ಗ್ರಾಮದ ಪಿರ್ಯಾದಿಯ ಸಂಬಂಧಿಕರಾದ ಮಹೇಶ ತಂದೆ ಈರಣ್ಣಗೌಡ ಪಾಟೀಲ ಇವರ ಮನೆಯಲ್ಲಿ ಘಟನೆ ಜರುಗಿರುತ್ತದೆ, ಚಾಸಾ.1 ನೇದ್ದವರ ಸಂಬಂಧಿ ಮಹೇಶ ಈತನ ಮದುವೆಯು ದಿನಾಂಕ 18-05-2025 ರಂದು ಇದ್ದಿದ್ದರಿಂದ ಮದುವೆ ಕಾರ್ಯಾಕ್ರಮಕ್ಕೆ ಆರೋಪಿತಳು ಹೋಗಿದ್ದಳು. ದಿನಾಂಕ 17-05-2025 ರಂದು ರಾತ್ರಿ ಹಳದಿ ಕಾರ್ಯಾಕ್ರಮ ಇರುದ್ದರಿಂದ ಮನೆಯವರೆಲ್ಲರೂ ಬೆಳಿಗ್ಗೆ 5.00 ಗಂಟೆಯವರೆಗೆ ಕಾರ್ಯಾಕ್ರಮ ಮಾಡಿ ಮಲಗಿಕೊಂಡಿರುತ್ತಾರೆ. ಆರೋಪಿತಳಾದ ರೇಣುಕಾ ಇವಳು ಕಳ್ಳತನ ಮಾಡುವ ಉದ್ದೇಶದಿಂದ ಬೇಡ್ ರೂಮಿನಲ್ಲಿ ಹೋಗಿ ಒಟ್ಟು 17 ತೋಲೆ ಬಂಗಾರದ ಆಭರಣಗಳು ಒಟ್ಟು ರೂ.8,50,000/- ಮತ್ತು ಕಿಮ್ಮತ್ತಿನ ಆಭರಣಗಳು ಕಳ್ಳತನ ಮಾಡಿರುತ್ತಾಳೆ. ಪ್ರಕರಣದ ತನಿಖೆ ಕಾಲಕ್ಕೆ ಚಾಸಾ.8 ರಿಂದ 13 ರವರು ಸಂಶಯ ವ್ಯಕ್ತಪಡಿಸಿದ ಮೇರೆಗೆ ಆರೋಪಿ ರೇಣುಕಾ ಇವಳಿಗೆ ವಿಚಾರಣೆ ಮಾಡಲಾಗಿ ಆರೋಪಿತಳು ಕಳ್ಳತನ ಮಾಡಿದ್ದ ಬಗ್ಗೆ ಒಪ್ಪಿಕೊಂಡಿರುತ್ತಾಳೆ. ನಂತರ ಆರೋಪಿತಳು ಒಪ್ಪಿಕೊಂಡು ಪ್ರಕರಣಕ್ಕೆ ಸಂಬಂಧಿಸಿದ ಒಟ್ಟು ಮುದ್ದೆಮಾಲು ಹಾಜರುಪಡಿಸಿದ್ದು ಇರುತ್ತದೆ. ಈ ನಿಟ್ಟಿನಲ್ಲಿ ಅಭಿಯೋಜಕರು ಪ್ರಾಸಾ-1 ರಿಂದ ಪ್ರಾಸಾ-11 ರವರನ್ನು ಸಾಕ್ಷಿ ವಿಚಾರಣೆ ಮಾಡಿಸಿ 18 ದಾಖಲೆಯನ್ನು ನಿಪಿ-1 ರಿಂದ ನಿಪಿ-18 ಎಂದು ನಿಶಾನೆಕರಿಸಿಕೊಂಡಿರುತ್ತಾರೆ.

10. ಅಭಿಯೋಜನೆಯು ಚಾಸಾ-2 ರವರನ್ನು ಪ್ರಾಸಾ-1 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಗುನ್ನೆ ಸ್ಥಳದ ಪಂಚ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ,

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಪೊಲೀಸರ ಕೋರಿಕೆಯ ಮೇರೆಗೆ 5 ತಿಂಗಳ ಹಿಂದೆ ಬಣಮಿಗಿಯಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 2 ಪೋಟೋಗಳನ್ನು ನೋಡಿ ಅವುಗಳಲ್ಲಿ ತಾನು ಇರುವುದಾಗಿ ಒಪ್ಪಿಕೊಂಡಿರುತ್ತಾರೆ, ಸದರಿ ಪೊಟೊಗಳನ್ನು ಯಾವ ವಿಚಾರವಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿನ ಸಲಹೆಗಳನ್ನು ಸದರಿ ಸಾಕ್ಷಿದಾರರು ನಿರಾಕರಿಸಿರುತ್ತಾರೆ.

11. ಅಭಿಯೋಜನೆಯು ಚಾಸಾ-3 ರವರನ್ನು ಪ್ರಾಸಾ-2 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಗುನ್ಹೆ ಸ್ಥಳದ ಪಂಚ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಪೊಲೀಸರ ಕೋರಿಕೆಯ ಮೇರೆಗೆ 4-5 ತಿಂಗಳ ಹಿಂದೆ ಬಣಮಿಗಿಯಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ-3 ಮತ್ತು 4 ಪೋಟೊಗಳನ್ನು ತೋರಿಸಲಾಗಿ ಅವುಗಳಲ್ಲಿ ತಾನು ಇರುವುದಾಗಿ ನೋಡಿ ಒಪ್ಪಿಕೊಂಡಿರುತ್ತಾರೆ. ಸದರಿ ಪೋಟೊಗಳನ್ನು ಯಾವ ವಿಚಾರವಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ

ಮಾಡಿದಂತಹ ಪಾಟೀ ಸವಾಲಿನಲ್ಲಿನ ಸಲಹೆಗಳನ್ನು ಸದರಿ ಸಾಕ್ಷಿದಾರರು ನಿರಾಕರಿಸಿರುತ್ತಾರೆ.

12. ಅಭಿಯೋಜನೆಯು ಚಾಸಾ-1 ರವರನ್ನು ಪ್ರಾಸಾ-3 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಪಿರ್ಯಾದಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 4-5 ತಿಂಗಳ ಹಿಂದೆ ತಾವು ಆಂದೊಲಾದಲ್ಲಿ ಇದ್ದೆವು ಎಂದು ನುಡಿದಿರುತ್ತಾರೆ. ಆಗ ಬೆಳಿಗ್ಗೆ 7 ಗಂಟೆಗೆ ಚಾಸಾ-9 ರವರು ಫೋನ್ ಮಾಡಿ ಬಂಗಾರ ಕಳವು ಆಗಿದೆ ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ತಕ್ಷಣ ತಾನು ಬಣಮಿಗಿ ಗ್ರಾಮಕ್ಕೆ ಹೋಗಿ ನೋಡಿ ನಂತರ ಜೇವರ್ಗಿಗೆ ಬಂದು ಪೊಲೀಸ್ ಠಾಣೆಯಲ್ಲಿ ನಿಪಿ-5 ರಂತೆ ದೂರು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಚಾಸಾ-9 ರವರ 3 ತೊಲೆ ಬಂಗಾರ ಮತ್ತು ಚಾಸಾ-10 ರವರ 14 ತೊಲೆ ಬಂಗಾರ ಕಳವು ಆಗಿತ್ತು ಎಂದು ನುಡಿದಿರುತ್ತಾರೆ. ದೂರು ನೀಡಿದ ನಂತರ ಬಂಗಾರವನ್ನು ಯಾರು ಕಳ್ಳತನ ಮಾಡಿದ್ದಾರೆ ಎಂದು ಗೊತ್ತಾಗಿಲ್ಲ ಎಂದು ನುಡಿದಿರುತ್ತಾರೆ. ತಾನು ಪೊಲೀಸರಿಗೆ ಮರುಹೇಳಿಕೆ ನೀಡಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದೂರಿನಲ್ಲಿ ಬರೆದಂತಹ ವಿಚಾರಗಳು ತನಗೆ ಗೊತ್ತಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿ ದಿನಾಂಕ 18-06-2025 ರಂದು ಆರೋಪಿತಳನ್ನು ತೋರಿಸಿದ ವಿಚಾರವಾಗಿ ಮರುಹೇಳಿಕೆ ನೀಡಿರುತ್ತೀರಿ ಎನ್ನುವುದನ್ನು ನಿರಾಕರಿಸಿರುತ್ತಾರೆ.

13. ಅಭಿಯೋಜನೆಯು ಚಾಸಾ-9 ರವರನ್ನು ಪ್ರಾಸಾ-4 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸುಮಾರು 8 ತಿಂಗಳ ಹಿಂದೆ ಮದುವೆಗಾಗಿ ತಾನು ಮತ್ತು ಚಾಸಾ-10 ರವರು ಮದುವೆಗೆ ಹೋಗಿದ್ದೆವು ಎಂದು ನುಡಿದಿರುತ್ತಾರೆ. ಬಂಗಾರ ಇಟ್ಟಿದ್ದೆವು ಅದು ಕಳವು ಆಗಿತ್ತು ಎಂದು ನುಡಿದಿರುತ್ತಾರೆ. ನಂತರ ಚಾಸಾ-1 ದೂರು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ತನ್ನ 3 ತೊಲೆ ಬಂಗಾರದ ತಾಳಿಸಾಮಾನು ಮತ್ತು ಚಾಸಾ-10 ರವರ ಬಂಗಾರದ ಗುಂಡಿನ ಸರ, 4 ಎಳೆ ಬಂಗಾರದ ತೊಳೆ ಇತ್ತು ಎಂದು ನುಡಿದಿರುತ್ತಾರೆ. ಕಳವು ಆದಂತಹ ಬಂಗಾರ ತಮಗೆ ಸಿಕ್ಕಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಬಂಗಾರವನ್ನು ಯಾರು ಕಳವು ಮಾಡಿದ್ದರು ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತಾನು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿನ ಎಲ್ಲಾ ಸಲಹೆಗಳನ್ನು ನಿರಾಕರಿಸಿರುತ್ತಾರೆ.

14. ಅಭಿಯೋಜನೆಯು ಚಾಸಾ-10 ರವರನ್ನು ಪ್ರಾಸಾ-5 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಚಾಸಾ-1 ತನ್ನ ಮೊಮ್ಮಗ ಆಗಬೇಕು ಎಂದು ನುಡಿದಿರುತ್ತಾರೆ. ಸುಮಾರು 6 ತಿಂಗಳ ಹಿಂದೆ ಮದುವೆಗಾಗಿ ಬಣಮಿಗಿಗೆ ತಾನು ಮತ್ತು ಚಾಸಾ-9 ರವರು ಹೋಗಿದ್ದೆವು ಎಂದು ನುಡಿದಿರುತ್ತಾರೆ. ಅಲ್ಲಿ

ತಮ್ಮ ಬಂಗಾರ ಇಟ್ಟಿದ್ದೆವು ಅದು ಕಳವು ಆಗಿತ್ತು ಎಂದು ನುಡಿದಿರುತ್ತಾರೆ. ತನ್ನ 2 ಬಂಗಾರದ ಬಳೆಗಳು, ಒಂದು ಬಂಗಾರದ ಗುಂಡಿನ ಸರ ಮತ್ತು ಇನ್ನೊಂದು ಸರ ಕಳವು ಆಗಿತ್ತು ಎಂದು ನುಡಿದಿರುತ್ತಾರೆ. ಚಾಸಾ-9 ರವರಿಗೆ ಸಂಬಂಧಪಟ್ಟ ತಾಳಿ ಸರ ಕಳವು ಆಗಿತ್ತು ಎಂದು ನುಡಿದಿರುತ್ತಾರೆ. ಚಾಸಾ-1 ರವರು ಕೇಸ್ ಮಾಡಿದರು ಎಂದು ನುಡಿದಿರುತ್ತಾರೆ. ಪೊಲೀಸರು ಕರೆಯಿಸಿ ಬಂಗಾರವನ್ನು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಬಂಗಾರವನ್ನು ಯಾರು ಕಳವು ಮಾಡಿದ್ದರು ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತಾನು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿನ ಎಲ್ಲಾ ಸಲಹೆಗಳನ್ನು ನಿರಾಕರಿಸಿರುತ್ತಾರೆ.

15. ಅಭಿಯೋಜನೆಯು ಚಾಸಾ-4 ರವರನ್ನು ಪ್ರಾಸಾ-6 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಗುನ್ನೆ ಸ್ಥಳದ ಪಂಚ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಒಂದು ವರ್ಷದ ಹಿಂದೆ ಪೊಲೀಸರು ಒಂದು ದಾಖಲೆಯ ಮೇಲೆ ತನ್ನ ಸಹಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿನ ಸಲಹೆಗಳನ್ನು ಸದರಿ ಸಾಕ್ಷಿದಾರರು ನಿರಾಕರಿಸಿರುತ್ತಾರೆ.

16. ಅಭಿಯೋಜನೆಯು ಚಾಸಾ-5 ರವರನ್ನು ಪ್ರಾಸಾ-7 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಗುನ್ನೆ ಸ್ಥಳದ ಪಂಚ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. 5-6 ತಿಂಗಳ ಹಿಂದೆ ಪೊಲೀಸರು ಬಂದು ತಮಗೆ ಮಹೇಶಗೌಡನ ಮನೆಗೆ ಕರೆದುಕೊಂಡು ಹೋಗಿ ಒಂದು ಫೋಟೊವನ್ನು ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿನ ಸಲಹೆಗಳನ್ನು ಸದರಿ ಸಾಕ್ಷಿದಾರರು ನಿರಾಕರಿಸಿರುತ್ತಾರೆ.

17. ಅಭಿಯೋಜನೆಯು ಚಾಸಾ-7 ರವರನ್ನು ಪ್ರಾಸಾ-8 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಜಪ್ತಿ ಪಂಚ ಮತ್ತು ಬಂಗಾರದ ಆಭರಣ ತೂಕ ಮಾಡಿದ ಜಪ್ತಿ ಪಂಚ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತಳು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. 7 ತಿಂಗಳ ಹಿಂದೆ ಸದರಿ ಸಹಿಯನ್ನು ಜೇವರ್ಗಿಯ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದು ನುಡಿದಿರುತ್ತಾರೆ. ತನ್ನ ಸಮಕ್ಷಮ ಬಂಗಾರದ ಆಭರಣಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪೊಲೀಸರು ಬಂಗಾರದ ಆಭರಣಗಳನ್ನು

ತೂಕ ಮಾಡಿರುವ ಬಗ್ಗೆ ಮಾಹಿತಿ ಇಲ್ಲ ಆದರೆ ಪೋಟೊ ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಪೋಟೋಗಳನ್ನು ಯಾವ ವಿಚಾರವಾಗಿ ತೆಗೆದುಕೊಂಡಿರುತ್ತಾರೆಂದು ಗೊತ್ತಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿ ಎಲ್ಲಾ ಸಲಹೆಗಳನ್ನು ನಿರಾಕರಿಸಿರುತ್ತಾರೆ.

18. ಅಭಿಯೋಜನೆಯು ಚಾಸಾ-15 ರವರನ್ನು ಪ್ರಾಸಾ-9 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಆರೋಪಿತಳನ್ನು ಹಿಡಿದು ತಂದ ಪೊಲೀಸ್ ಸಿಬ್ಬಂದಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-17 ರವರ ಆದೇಶದ ಪ್ರಕಾರ ದಿನಾಂಕ 18-6-2025 ರಂದು ತನಗೆ ಮತ್ತು ಚಾಸಾ-16 ರವರಿಗೆ ಆರೋಪಿತಳಿಗೆ ಕರೆದುಕೊಂಡು ಬರಲು ಹೇಳಿದರು ಎಂದು ನುಡಿದಿರುತ್ತಾರೆ. ಅದರ ಪ್ರಕಾರ ತಾವು ಆರೋಪಿತಳ ಮನೆ ಹತ್ತಿರ ಹೋದಾಗ ಆರೋಪಿತಳು ಇರಲಿಲ್ಲ ಎಂದು ನುಡಿದಿರುತ್ತಾರೆ. ಆರೋಪಿತಳು ಪೊಲೀಸ್ ಠಾಣೆ ಹತ್ತಿರ ಹೋಗುತ್ತೇನೆ ಎಂದು ಹೇಳಿ ಹೋಗಿದ್ದಾಳೆ ಎಂದು ಬಾತ್ಮಿದಾರರ ಮುಖಾಂತರ ಗೊತ್ತಾಯಿತು, ನಂತರ ತಾವು ಪೊಲೀಸ್ ಠಾಣೆಗೆ ಹೋಗಿರುತ್ತೇವೆ ಎಂದು ನುಡಿದಿರುತ್ತಾರೆ. ಮಧ್ಯಾಹ್ನ 2 ಗಂಟೆಗೆ ಆರೋಪಿತಳು ಪೊಲೀಸ್ ಠಾಣೆ ಹತ್ತಿರ ಹೋಗುತ್ತಿದ್ದಳು ಎಂದು ನುಡಿದಿರುತ್ತಾರೆ. ಆರೋಪಿತಳನ್ನು ಕರೆದುಕೊಂಡು ಹೋಗಿ ಚಾಸಾ-17 ರವರ ಮುಂದೆ ಹಾಜರುಪಡಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಪ್ರಾಸಾ-9 ರವರು ಆರೋಪಿತಳ ಪರ ಪಾಟೀ ಸವಾಲಿನಲ್ಲಿನ ಎಲ್ಲಾ ಸಲಹೆಗಳನ್ನು ನಿರಾಕರಿಸಿರುತ್ತಾರೆ.

19. ಅಭಿಯೋಜನೆಯು ಚಾಸಾ-16 ರವರನ್ನು ಪ್ರಾಸಾ-10 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ತನಿಖಾಧಿಕಾರಿಗಳಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18-05-2025 ರಂದು ಸಂಜೆ 4 ಗಂಟೆಗೆ ತಾನು ಎಸ್.ಎಚ್.ಓ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಬೆರಳಚ್ಚು ಮಾಡಿದಂತಹ ದೂರನ್ನು ನಿಪಿ-5 ರಂತೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಅದರ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿಪಿ-18 ರಂತೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-17 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಪ್ರಾಸಾ-10 ರವರು ಆರೋಪಿತಳ ಪರ ಪಾಟೀ ಸವಾಲಿನಲ್ಲಿನ ಎಲ್ಲಾ ಸಲಹೆಗಳನ್ನು ನಿರಾಕರಿಸಿರುತ್ತಾರೆ.

20. ಅಭಿಯೋಜನೆಯು ಚಾಸಾ-6 ರವರನ್ನು ಪ್ರಾಸಾ-11 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಜಪ್ತಿ ಪಂಚ ಮತ್ತು ಬಂಗಾರದ ಆಭರಣ ತೂಕ ಮಾಡಿದ ಜಪ್ತಿ ಪಂಚ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. 6-7 ತಿಂಗಳ ಹಿಂದೆ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪೊಲೀಸರು ಒಂದು ದಾಖಲೆಗೆ ತನ್ನ ಸಹಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪೊಲೀಸರು ತನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಯಾವುದೇ ಬಂಗಾರದ ಆಭರಣ ಜಪ್ತಿಪಡಿಸಿಕೊಂಡಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು

ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿನ ಎಲ್ಲಾ ಸಲಹೆಗಳನ್ನು ನಿರಾಕರಿಸಿರುತ್ತಾರೆ.

21. ಫ್ರಾಸಾ-1 ರಿಂದ ಫ್ರಾಸಾ-11 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಫ್ರಾಸಾ-3 ರವರು ಪಿರ್ಯಾದಿದಾರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ತನಗೆ ಗೊತ್ತಿಲ್ಲ ಎಂದು ಹಾಗೂ ದೂರು ನೀಡಿದ ನಂತರ ಬಂಗಾರವನ್ನು ಯಾರು ಕಳ್ಳತನ ಮಾಡಿದ್ದಾರೆ ಎಂದು ಗೊತ್ತಾಗಿಲ್ಲ ಎಂದು ನುಡಿದಿರುತ್ತಾರೆ. ತಾನು ಪೊಲೀಸರಿಗೆ ಮರುಹೇಳಿಕೆ ನೀಡಿಲ್ಲ ಎಂದು ನುಡಿದಿರುತ್ತಾರೆ ಮತ್ತು ನಿಪಿ.1 ದೂರಿನಲ್ಲಿ ಬರೆದಂತಹ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಫ್ರಾಸಾ-1 ಮತ್ತು ಫ್ರಾಸಾ-2 ಗುನ್ನೆ ಸ್ಥಳದ ಪಂಚ ಸಾಕ್ಷಿದಾರರು ಆಗಿದ್ದು ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ ಮತ್ತು ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದು ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಲ್ಲದೇ ಫ್ರಾಸಾ-4 ಮತ್ತು ಫ್ರಾಸಾ-5 ರವರು ಪ್ರತ್ಯಕ್ಷ ಸಾಕ್ಷಿದಾರರು ಆಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ತಮಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಬಂಗಾರವನ್ನು ಯಾರು ಕಳವು ಮಾಡಿದ್ದರು ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ ಮತ್ತು ತಾವು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲ ಎಂದು ನುಡಿದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಫ್ರಾಸಾ-6 ಮತ್ತು ಫ್ರಾಸಾ-7 ರವರ ಗುನ್ನೆ ಸ್ಥಳದ ಪಂಚ ಸಾಕ್ಷಿದಾರರಾಗಿದ್ದು, ಇವರು ಸಹ ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ತಮಗೆ ಗೊತ್ತಿಲ್ಲ ಎಂದು ಹಾಗೂ ತಮಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು

ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ ನುಡಿದಿದ್ದು, ಅವರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅವರು ಅಭಿಯೋಜನೆಯನ್ನು ಬೆಂಬಲಿಸಿರುವುದಿಲ್ಲ. ಪ್ರಾಸಾ-8 ಜಪ್ತಿ ಪಂಚ ಸಾಕ್ಷಿದಾರರು ಆಗಿದ್ದು ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತಳು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. 7 ತಿಂಗಳ ಹಿಂದೆ ಸದರಿ ಸಹಿಯನ್ನು ಜೇವರ್ಗಿಯ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದು ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಅಲ್ಲದೇ ಪ್ರಾಸಾ-11 ರವರು ಸಹ ಜಪ್ತಿ ಪಂಚ ಮತ್ತು ಬಂಗಾರದ ಆಭರಣ ತೂಕ ಮಾಡಿದ ಜಪ್ತಿ ಪಂಚ ಸಾಕ್ಷಿದಾರರು ಆಗಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತನಗೆ ಈ ಪ್ರಕರಣದ ಬೆಗ್ಗ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ತಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪೊಲೀಸರು ತನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಯಾವುದೇ ಬಂಗಾರದ ಆಭರಣ ಜಪ್ತಿಪಡಿಸಿಕೊಂಡಿಲ್ಲ ಎಂದು ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಎರಡನೆಯದಾಗಿ ಅಭಿಯೋಜನೆಯು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಮತ್ತು ಅಭಿಯೋಜನೆಯನ್ನು ಬೆಂಬಲಿಸಿರುವ ಪ್ರಾಸಾ-9 ಮತ್ತು ಪ್ರಾಸಾ-10 ರವರು ಪೊಲೀಸ್ ಇಲಾಖೆಯ ನೌಕರರಾಗಿರುವುದರಿಂದ ಅವರ ಸಾಕ್ಷ್ಯದ ಮೇಲೆ ಆರೋಪಿಯನ್ನು ಶಿಕ್ಷಿಸುವುದು ಕಾನೂನು ಸಮ್ಮತವಾಗುವುದಿಲ್ಲ. ಕಾರಣ ಅವರು

ಆರೋಪಿತಳಿಗೆ ಶಿಕ್ಷೆಯನ್ನು ಕೊಡಿಸುವ ವಿಷಯದಲ್ಲಿ ಆಸಕ್ತಿಯುಳ್ಳ ಸಾಕ್ಷಿದಾರರಾಗಿರುತ್ತಾರೆ. ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾಸಾ.3 ಪಿರ್ಯಾದಿದಾರರು ಹಾಗೂ ಗುನ್ನೆ ಸ್ಥಳ ಹಾಗೂ ಜಪ್ತಿ ಪಂಚನಾಮೆ ಸಾಕ್ಷಿದಾರರಾದ ಪ್ರಾಸಾ.1, 2, 4, 7, 8, ಮತ್ತು 11 ರವರು ನ್ಯಾಯಾಲಯದ ಮುಂದೆ ಆರೋಪಿತಳ ವಿರುದ್ದ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆದ್ದರಿಂದ ಅಭಿಯೋಜನೆಯು ದೂರು ಹಾಗೂ ಗುನ್ನ ಸ್ಥಳ ಪಂಚನಾಮೆ ಹಾಗೂ ಜಪ್ತು ಪಂಚನಾಮೆಯನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಅಭಿಯೋಜನೆಯು ದೋಷಾರೋಪಣೆ ಪತ್ರದಲ್ಲಿ ಆರೋಪಿಸಿರುವಂತೆ ಆರೋಪಿತಳ ವಿರುದ್ದ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಲಭ್ಯವಿರುವ ಸಾಕ್ಷ್ಯದಾರಗಳನ್ನು ಪರಿಶೀಲಿಸಲಾಗಿ ಅಭಿಯೋಜಕರು ಆರೋಪಿತಳ ಮೇಲಿನ ದೋಷಾರೋಪಣೆಯನ್ನು ನ್ಯಾಯೋಚಿತ ರೀತಿಯಲ್ಲಿ ಮತ್ತು ಸಂಶಯತೀತವಾಗಿ ರುಜುವಾತು ಪಡಿಸುವಲ್ಲಿ ವಿಫಲಗೊಂಡಿದ್ದರಿಂದ ಸದರಿ ಅನುಮಾನದ ಲಾಭವನ್ನು ಆರೋಪಿತಳಿಗೆ ನೀಡಿ ಅವರ ಮೇಲೆ ಮಾಡಲಾದ ಆರೋಪಣೆಯಿಂದ ಮುಕ್ತಿಗೊಳಿಸಿ ಬಿಡುಗಡೆಗೊಳಿಸಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟು ಅಂಶ-1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

22. **<u>ಅಂಶ-2 ಕ್ಕೆ:</u>** ಅಂಶ-1 ಕ್ಕೆ ಸಂಬಂಧಪಟ್ಟಂತೆ ಮಾಡಿರುವ ಚರ್ಚೆಯಿಂದ ಆರೋಪಿತಳು ಅನುಮಾನದ ಲಾಭವನ್ನು ಪಡೆದು ಬಿಡುಗಡೆ ಹೊಂದಲು ಅರ್ಹರಿರುತ್ತಾರೆ ಎಂದು ಅಭಿಪ್ರಾಯಪಡಲಾಗಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**ಆದೇಶ**

ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 271(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತಳು ಭಾರತೀಯ ನ್ಯಾಯ ಸಂಹಿತಾ ಕಲಂ.305 ರ ಅಡಿಯಲ್ಲಿ ಮಾಡಿರುವ ಆಪಾದನೆಗಳಿಂದ ನಿರ್ದೋಷಿತಳೆಂದು ಘೋಷಿಸಿ ಸದರಿ ಆರೋಪಗಳಿಂದ ದೋಷಮುಕ್ತರನ್ನಾಗಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತಳ ಮತ್ತು ಅವಳ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು 06 ತಿಂಗಳ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಅಮಾನತ್ತು ಮಾಡಲಾದ 1) ಒಂದು 3 ತೊಲೆ ಬಂಗಾರದ ತಾಳಿ ಸಾಮಾನು ಸರ, 2) 2 ಬಂಗಾರದ ಬಳೆಗಳು ಒಟ್ಟು 5 ತೊಲೆ 9 ಗ್ರಾಂ, 3) 5 ತೊಲೆ 8 ಗ್ರಾಂ 300 ಮಿ.ಗ್ರಾಂ. ಕೊರಳಲ್ಲಿ ಹಾಕುವ ಸರ, 4) ಒಂದು ಬಂಗಾರದ ಗುಂಡಿನ ಸರ (24 ಗುಂಡುಗಳು) 2 ತೊಲೆಯದ್ದು ಅವುಗಳ ಮಾಲೀಕರ ಮಧ್ಯಂತರ ವಶಕ್ಕೆ ನೀಡಿದ ಆದೇಶವನ್ನೇ ಖಾಯಂಗೊಳಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದನ್ನು ನಾನು ಓದಿ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 7 ನೇ ಮಾಹೆಯ ಮಾರ್ಚ್ 2026 ರಂದು ನನ್ನಿಂದ ಘೋಷಿಸಲಾಯಿತು).

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಜೇವರಗಿ.

**ಅನುಬಂಧ**

**ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿಃ**

ಪ್ರಾಸಾ 1 : ಶಂಕರಗೌಡ ತಂದೆ ಪೀರಶೆಟ್ಟಿ.
ಪ್ರಾಸಾ 2 : ಸದ್ದಾಮ್  ತಂದೆ ಫಕೀರ್ ಪಟೇಲ್.
ಪ್ರಾಸಾ 3 : ಕರುಣಾಸಾಗರ ತಂದೆ ನಾಗಣ್ಣ.
ಪ್ರಾಸಾ 4 : ಪಾರ್ವತಿ ಗಂಡ ನಾಗಣ್ಣ.
ಪ್ರಾಸಾ 5 : ವಿಜಯಲಕ್ಷ್ಮೀ ಗಂಡ ಶಂಕರಗೌಡ.
ಪ್ರಾಸಾ 6 : ರುದ್ರಯ್ಯ ತಂದೆ ಬಸಯ್ಯ.
ಪ್ರಾಸಾ 7 : ದುಂಡಪ್ಪ ತಂದೆ ಅಣೆಪ್ಪ.
ಪ್ರಾಸಾ 8 : ಕುಮಾರ ಗೌಡ ತಂದೆ ಶಿವಲಿಂಗಪ್ಪ.
ಪ್ರಾಸಾ 9 : ಸಿದ್ದರಾಮ ತಂದೆ ಯಲಗೊಂಡ ಪಾಟೀಲ.
ಪ್ರಾಸಾ 10 : ಕಲಾವತಿ ಗಂಡ ಚಿದಾನಂದ.
ಪ್ರಾಸಾ 11 : ಲಿಂಗರಾಜ ತಂದೆ ಬಸವರಾಜ.

**ಅಭಿಯೋಜನೆ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿಃ**

ನಿಪಿ-1 : ಗುನ್ಹೆ ಸ್ಥಳದ ಪಂಚನಾಮೆ.
ನಿಪಿ-1(ಎ) : ಪ್ರಾಸಾ-1 ರವರ ಸಹಿ.
ನಿಪಿ-1(ಬಿ) : ಪ್ರಾಸಾ-2 ರವರ ಸಹಿ.
ನಿಪಿ-1(ಸಿ) : ಪ್ರಾಸಾ-3 ರವರ ಸಹಿ.
ನಿಪಿ-2 : ಕಚ್ಚಾ ನಕಾಶೆ.
ನಿಪಿ-2(ಎ) : ಪ್ರಾಸಾ-1 ರವರ ಸಹಿ.
ನಿಪಿ-2(ಬಿ) : ಪ್ರಾಸಾ-2 ರವರ ಸಹಿ.
ನಿಪಿ-2(ಸಿ) : ಪ್ರಾಸಾ-3 ರವರ ಸಹಿ.
ನಿಪಿ-3 & 4 : ಛಾಯ ಚಿತ್ರಗಳು.
ನಿಪಿ-5 : ದೂರು.
ನಿಪಿ-5(ಎ) : ಪ್ರಾಸಾ-3 ರವರ ಸಹಿ.

| | | |
|---|---|---|
| ನಿಪಿ-5(ಬಿ) | : | ಪ್ರಾಸಾ-10 ರವರ ಸಹಿ. |
| ನಿಪಿ-6 | : | ಪ್ರಾಸಾ-3 ರವರ ಮರು ಹೇಳಿಕೆ. |
| ನಿಪಿ-7 | : | ಪ್ರಾಸಾ-3 ರವರ ಮರು ಹೇಳಿಕೆ. |
| ನಿಪಿ-8 | : | ಪ್ರಾಸಾ-5 ರವರ ಮರು ಹೇಳಿಕೆ. |
| ನಿಪಿ-9 | : | ಸ್ಥಳ ಪಂಚನಾಮೆ. |
| ನಿಪಿ-9(ಎ) | : | ಪ್ರಾಸಾ-6 ರವರ ಸಹಿ. |
| ನಿಪಿ-9(ಬಿ) | : | ಪ್ರಾಸಾ-7 ರವರ ಸಹಿ. |
| ನಿಪಿ-10 | : | ಕಚ್ಚಾ ನಕಾಶೆ. |
| ನಿಪಿ-10(ಎ) | : | ಪ್ರಾಸಾ-6 ರವರ ಸಹಿ. |
| ನಿಪಿ-10(ಬಿ) | : | ಪ್ರಾಸಾ-7 ರವರ ಸಹಿ. |
| ನಿಪಿ-11 | : | ಒಂದು ಛಾಯ ಚಿತ್ರ. |
| ನಿಪಿ-12 | : | ಜಪ್ತಿ ಪಂಚನಾಮೆ. |
| ನಿಪಿ-12(ಎ) | : | ಪ್ರಾಸಾ-8 ರವರ ಸಹಿ. |
| ನಿಪಿ-12(ಬಿ) | : | ಪ್ರಾಸಾ-11 ರವರ ಸಹಿ. |
| ನಿಪಿ-13 | : | ಆಭರಣಗಳ ತೂಕ ಮಾಡುವ ಪಂಚನಾಮೆ. |
| ನಿಪಿ-13(ಎ) | : | ಪ್ರಾಸಾ-8 ರವರ ಸಹಿ. |
| ನಿಪಿ-13(ಬಿ) | : | ಪ್ರಾಸಾ-11 ರವರ ಸಹಿ. |
| ನಿಪಿ-14 & 15 | : | ಎರಡು ಫೋಟೋಗಳು. |
| ನಿಪಿ-16 | : | ಜ್ಞಾಪನ ಪತ್ರ. |
| ನಿಪಿ-16(ಎ) | : | ಪ್ರಾಸಾ-9 ರವರ ಸಹಿ. |
| ನಿಪಿ-17 | : | ವರದಿ. |
| ನಿಪಿ-17(ಎ) | : | ಪ್ರಾಸಾ-9 ರವರ ಸಹಿ. |
| ನಿಪಿ-18 | : | ಪ್ರಥಮ ವರ್ತಮಾನ ವರದಿ. |
| ನಿಪಿ-18(ಎ) | : | ಪ್ರಾಸಾ-10 ರವರ ಸಹಿ. |

**ಅಭಿಯೋಜನೆ ಪರ ನಿಷಾನೆ ಮಾಡಲಾದ ಮುದ್ದೇ ಮಾಲುಗಳ ಪಟ್ಟಿ:**

-ಇಲ್ಲ-

**ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿಃ**

-ಇಲ್ಲ-

**ಆರೋಪಿತರ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿಃ**

-ಇಲ್ಲ-

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಜೇವರಗಿ.